**ಓಎಸ್ ನಂಃ 70/2010**
**ಡಿ.ಡಬ್ಲೂಃ 2**

**ಸಾಕ್ಷಿಗೆ ದಿನಾಂಕ 05-12-2025 ರಂದು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು**

**ಪಾಟೀ ಸವಾಲುಃ ವಾದಿ ಪರ ಶ್ರೀ. ಡಿ.ಡಿ. ವಕೀಲರಿಂದ**

ಸರೂಬಾಯಿ ನನ್ನ ದೊಡ್ಡಮ್ಮ. ಸರೂಬಾಯಿಯ ಗಂಡನಿಗೆ ಒಟ್ಟು 3 ಜನ ಅಣ್ಣತಮ್ಮಂದಿರು ಇದ್ದರು. ದಾವಾ ಜಮೀನು ಮೊದಲು ಸರೂಬಾಯಿಯವರ ಹೆಸರಿನಲ್ಲಿತ್ತು ಎಂದರೆ ಸರಿ. ನಿಮ್ಮ ತಂದೆ, ಸರೂಬಾಯಿಯವರ ಗಂಡ ಮತ್ತು ಮತ್ತೊಬ್ಬ ಸಹೋದರನಿಗೆ ತಲಾ 5 ಎಕ್ರೆ ಜಮೀನುಗಳು ಪಾಲಾಗಿ ಬಂದಿದ್ದವು ಎಂದರೆ ಸರಿ. ಸದರಿ ಸರೂಬಾಯಿ ಗಂಡ ತೀರಿಕೊಂಡ ನಂತರ ಆತನ ಪಾಲಿನ 5 ಎಕ್ರೆ ಜಮೀನು ಸರೂಬಾಯಿ ಹೆಸರಿನಲ್ಲಿ ನಮೂದಾಯಿತು ಎಂದರೆ ಸರಿ. ಸಾಕ್ಷಿ ಮುಂದುವರಿದು ಕೇವಲ ದಾಖಲೆಗಳಲ್ಲಿ ನಮೂದಾಗಿದ್ದು ಆಕೆಗೆ ಯಾವುದೇ ಹಕ್ಕು ಇರಲಿಲ್ಲ ಎಂದು ನುಡಿಯುತ್ತಾರೆ. ಮೃತ ಸರೂಬಾಯಿಯವರ ಹೆಸರು ದಾವಾ ಆಸ್ತಿಯ ಕಬ್ಜೆದಾರ ಮತ್ತು ಮಾಲಿಕರೆಂದು ಕಂದಾಯ ದಾಖಲೆಗಳಲ್ಲಿ ನಮೂದಾಗಿತ್ತು ಎಂದರೆ ಸರಿ.

2009 ರಲ್ಲಿ ವಾದಿ ಮತ್ತು ಮೃತ ಸರೂಬಾಯಿ ನಡುವೆ ಆದ ವ್ಯವಹಾರಕ್ಕೆ ನೀವು ಸಹಿ ಮಾಡಿದ್ದೀರಾ ಎಂದರೆ ಸಾಕ್ಷಿ ನಾನು ಸಹಿ ಮಾಡಿಲ್ಲ ಮತ್ತು ಆ ರೀತಿ ಯಾವುದೇ ವ್ಯವಹಾರ ಆಗಿಲ್ಲ ಎಂದು ನುಡಿಯುತ್ತಾರೆ. ಸರೂಬಾಯಿ ಜೀವಂತ ಇದ್ದಾಗ ದಾವಾ ಆಸ್ತಿಯನ್ನು ಆಕೆಯೇ ನೋಡಿಕೊಳ್ಳುತ್ತಿದ್ದಳು ಎಂದರೆ ಸಾಕ್ಷಿ ನಾನೇ ನೋಡುತ್ತಿದ್ದೆ ಎಂದು ನುಡಿಯುತ್ತಾರೆ. ನೀವು ದಾವಾ ಆಸ್ತಿಯಲ್ಲಿ ಸಾಗುವಳಿ ಮಾಡಿದ ಬಗ್ಗೆ ತೋರಿಸಲು ದಾಖಲೆಗಳನ್ನು ನ್ ಯಾಯಾಲಯಕ್ಕೆ ನೀಡಿದ್ದೀರಾ ಎಂದರೆ ಸಾಕ್ಷಿ ನೀಡಿಲ್ಲ ಎಂದು ನುಡಿಯುತ್ತಾರೆ.

ಶಿವಾಜಿ ತಂದೆ ಕಂಡೇರಾವ್ ಇವರ ಪರಿಚಯ ನನಗಿಲ್ಲ. 2 ನೇ ಪ್ರತಿವಾದಿಯ ಗಂಡನ ಹೆಸರು ಶಿವಾಜಿ ಆಗಿರುತ್ತದೆ. ನಿಪಿ-1 ಕ್ಕೆ ಸಾಕ್ಷಿಯಾಗಿ ಸಹಿ ಮಾಡಿರುವ ಶಿವಾಜಿ ತಂದೆ ಕಂಡೇರಾವ್ ಇವರು 2 ನೇ ಪ್ರತಿವಾದಿಯ ಗಂಡ ಎಂದರೆ ಸರಿ. ಮೃತ ಸರೂಬಾಯಿ ತಾನು ಜೀವಂತ ಇದ್ದಾಗ ತನ್ನ ವ್ಯವಸ್ಥೆಯನ್ನು ತಾನೇ ಮಾಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ಆಕೆಯ ದಿನನಿತ್ಯದ ಕೃಷಿ ಚಟುವಟಿಕೆಗಳ ಬಗ್ಗೆ ನಿಮಗೆ ಮಾಹಿತಿ ಇದೆಯಾ ಎಂದರೆ ಸಾಕ್ಷಿ ಆಕೆ

ಏನೂ ಮಾಡುತ್ತಿರಲಿಲ್ಲ ನಾನೇ ಕೃಷಿ ಚಟುವಟಿಕೆ ದಾವಾ ಆಸ್ತಿಯಲ್ಲಿ ಮಾಡುತ್ತಿದ್ದೆ ಎಂದು ನುಡಿಯುತ್ತಾರೆ. ಮೃತ ಸರೂಬಾಯಿ ಮತ್ತು ವಾದಿಯ ನಡುವಿನ ವ್ಯವಹಾರಗಳು ಸುಳ್ಳು ಎಂದು ಹೇಳಲು ಕಾರಣ ಮತ್ತು ಆಧಾರ ಏನು ಎಂದು ಕೇಳಿದಾಗ ಸಾಕ್ಷಿ ಸರೂಬಾಯಿ ನಮ್ಮ ಮನೆಯಲ್ಲಿಯೇ ಇರುತ್ತಿದ್ದ ಕಾರಣ ಆಕೆ ಯಾವುದೇ ವ್ಯವಹಾರ ಮಾಡಿಲ್ಲ ಎಂದು ನನಗೆ ಗೊತ್ತಿದೆ ಎಂದು ನುಡಿಯುತ್ತಾರೆ. ಸರೂಬಾಯಿ ನಮ್ಮ ಮನೆಯಲ್ಲಿ ವಾಸವಾಗಿದ್ದಳು ಎಂದು ತೋರಿಸಲು ನನ್ನ ಬಳಿ ಯಾವುದೇ ದಾಖಲೆಗಳಿಲ್ಲ. ಮೃತ ಸರೂಬಾಯಿ ತನ್ನ ಆರ್ಥಿಕ ಅಡಚಣೆಗಾಗಿ ಆಕೆಯ ಪಾಲಿಗೆ ಬಂದಿದ್ದ ದಾವಾ ಆಸ್ತಿಯನ್ನು ವಾದಿಗೆ ಮಾರಾಟ ಮಾಡುವ ಉದ್ದೇಶದಿಂದ ಖರೀದಿ ಕರಾರು ಪತ್ರವನ್ನು ಬರೆದುಕೊಟ್ಟಿದ್ದಳು ಎಂದರೆ ಸರಿಯಲ್ಲ. ಸರೂಬಾಯಿ ಈಕೆ ಖರೀದಿ ಕರಾರು ಪತ್ರ ಮಾಡುವ ಸಮಯದಲ್ಲಿ ರೂ.20,000/- ಮುಂಗಡ ಹಣ ಪಡೆದು ಅದರ ರಶೀದಿಯನ್ನು ಬರೆದು ಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಸರೂಬಾಯಿಯವರು ಜೀವಂತ ಇದ್ದಾಗ ದಾವಾ ಆಸ್ತಿಯ ಉತ್ಪನ್ನದಿಂದ ತನ್ನ ಜೀವನ ನಡೆಸುತ್ತಿದ್ದಳು ಎಂದರೆ ಸರಿಯಲ್ಲ. ದಾವಾ ಆಸ್ತಿ ಆಕೆಯ ಸಂಬಂಧಪಟ್ಟಿದ್ದ ಕಾರಣ ಅದರ ವ್ಯವಹಾರವನ್ನು ಆಕೆಯೇ ಮಾಡಿ ವಾದಿಗೆ ಒಂದು ಖರೀದಿ ಕರಾರು ಪತ್ರ ಬರೆದುಕೊಟ್ಟಿದ್ದಾರೆ ಎಂದರೆ ಸರಿಯಲ್ಲ.

ನನಗೆ ಈ ದಾವೆಯ ವ್ಯವಹಾರ ಆಗಿದೆ ಎಂದು ಸರೂಬಾಯಿ ತೀರಿಕೊಂಡ ನಂತರ ಗೊತ್ತಾಯಿತು. ಸರೂಬಾಯಿಯವರು ಸುಮಾರು 13 ವರ್ಷಗಳ ಹಿಂದೆ ತೀರಿಕೊಂಡಿರುತ್ತಾರೆ. ಈ ದಾವೆಯ ವ್ಯವಹಾರದ ಕುರಿತು ಮೃತ ಸರೂಬಾಯಿ ನನ್ನೊಂದಿಗೆ ಯಾವುದೇ ಮಾತುಕತೆ ಮಾಡಿಲ್ಲ. ಮೂಲ ದಾವೆ ನಂ. 84/2010 ರಲ್ಲಿ ಒಂದು ಒಪ್ಪಿಗೆ ಪತ್ರವನ್ನು ನೀವು ಹಾಜರುಪಡಿಸಿದ್ದೀರಿ ಎಂದರೆ ಸರಿ. ಸದರಿ ದಾಖಲೆಯ ಮೇಲೆ ನೀವು ಯಾವುದಾದರೂ ದಾವೆಯನ್ನು ಸಲ್ಲಿಸಿದ್ದೀರಾ ಎಂದರೆ ಸಾಕ್ಷಿ ದಾವೆಯನ್ನು ಸಲ್ಲಿಸಿದ್ದೇನೆ ಎಂದು ನುಡಿಯುತ್ತಾರೆ. ನೀವು ಸಲ್ಲಿಸಿದ ದಾವೆ ಕುರಿತು ಯಾವುದಾದರೂ ದಾಖಲೆಗಳನ್ನು ಈ ದಾವೆಯಲ್ಲಿ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಹಾಜರುಪಡಿಸಿಲ್ಲ ಎಂದು ನುಡಿಯುತ್ತಾರೆ. ಸರೂಬಾಯಿ ಇವರು ವಾದಿಗೆ ಖರೀದಿ ಕರಾರು ಪತ್ರ ಬರೆದುಕೊಟ್ಟಿದ್ದರೂ ಸಹ ಈಗ ವಾದಿಗೆ ನಷ್ಟ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ನನಗೆ ಈ ದಾವೆಯ ವ್ಯವಹಾರದ ಕುರಿತು ಊರಿನಲ್ಲಿದ್ದ ಜನರಿಂದ ಗೊತ್ತಾಯಿತು ಎಂದು ಹೇಳಿ ಸಾಕ್ಷಿ

ಊರಿನ ನಾಡ ಕಛೇರಿಯ ಅಧಿಕಾರಿಗಳಿಂದ ಗೊತ್ತಾಯಿತು ಎಂದು ನುಡಿಯುತ್ತಾರೆ. ಸರೂಬಾಯಿ ದಾವಾ ಆಸ್ತಿಯ ಮಾಲಿಕರಾಗಿದ್ದ ಕಾರಣ ಆಕೆ ವಾದಿಗೆ ದಾವಾ ಆಸ್ತಿಯನ್ನು ಮಾರಾಟ ಮಾಡುವ ಖರೀದಿ ಕರಾರು ಪತ್ರ ಬರೆದುಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ನೀವು ದಾವಾ ಆಸ್ತಿಯನ್ನು ಕಬಳಿಸುವ ಉದ್ದೇಶದಿಂದ ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿದ್ದೀರಿ ಎಂದರೆ ಸರಿಯಲ್ಲ. ಸರೂಬಾಯಿ ತೀರಿಕೊಳ್ಳುವವರೆಗೆ ತನ್ನ ವ್ಯವಹಾರವನ್ನು ತಾನೇ ಮಾಡಿಕೊಳ್ಳುವಷ್ಟು ಬುದ್ದಿಮತ್ತೆ ಇತ್ತು ಎಂದರೆ ಸರಿ.

**ಪಾಟೀ ಸವಾಲುಃ 3 ನೇ ಪ್ರತಿವಾದಿ ಪರ ಶ್ರೀಮತಿ ಎಮ್.ಎಸ್.ಎಸ್. ವಕೀಲರಿಂದ**

ಕೃಷ್ಣಾ ಇವರು ನಿಮ್ಮ ತಂದೆ ಆಗಿದ್ದು ಅವರಿಗೆ 2 ಮದುವೆಗಳಾಗಿದ್ದವು ಎಂದರೆ ಸರಿ. ಭಾಗು ಬಾಯಿ ಅವರ ಮೊದಲನೇ ಹೆಂಡತಿ ಎಂದರೆ ಸರಿ. ಅವರಿಗೆ 3 ನೇ ಪ್ರತಿವಾದಿ ಮಾತ್ರ ಮಗಳು ಎಂದರೆ ಸರಿ. ಕೃಷ್ಣಾ ಇವರ 2 ನೇ ಹೆಂಡತಿ ಅನುಸೂಬಾಯಿ ಆಗಿದ್ದು ಅವರಿಗೆ ನಾನೊಬ್ಬನೇ ಮಗ ಎಂದರೆ ಸರಿ. ಅಂಬೂಬಾಯಿ ಮತ್ತು ನಾನು ಅಣ್ಣ ತಂಗಿ ಎಂದರೆ ಸರಿ.

**ಮರುವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ. ಹೇ . ಕೇ. ಸರಿ ಇದೆ.

ಸಿವಿಲ್ ನ್ಯಾಯಾಧೀಶರು,
ಚಿತ್ತಾಪೂರ.